ಸೆಲೆಬ್ರಿಟಿ

■ ಹನಿ

## ಮುರಳಿಯ ‘ದೂಸ್ರಾ’

‘ದೂಸ್ರಾ’ ಮಾಂತ್ರಿಕ, ಶ್ರೀಲಂಕಾದ ಮುತ್ತಯ್ಯ ಮುರಳೀಧರನ್ ಜೀವನ ಒಂದು ಸುತ್ತು ಬಂದಂತಿದೆ. ಒಂದು ಕಾಲದಲ್ಲಿ ಆಸ್ಟ್ರೇಲಿಯಾದ ಕ್ರಿಕೆಟ್ ಪ್ರೇಮಿಗಳಿಂದ ಮೈದಾನದಲ್ಲಿ ಹೀಯಾಳಿಸಲ್ಪಟ್ಟ ಮುರಳಿ, ಇದೀಗ ಅದೇ ಆಸ್ಟ್ರೇಲಿಯಾ ಕ್ರಿಕೆಟ್ ತಂಡಕ್ಕೆ ತರಬೇತಿದಾರನಾಗಿ ಆಯ್ಕೆಯಾಗಿದ್ದಾರೆ! ಮುರಳಿಯ ಬೌಲಿಂಗ್ ಅನುಭವದ ‘ದೂಸ್ರಾ’ ಮುಂದೆ ಆಸ್ಟ್ರೇಲಿಯಾದ ಕ್ರಿಕೆಟ್ ಆಡಳಿತವು ಕ್ಲೀನ್ ಬೌಲ್ಡ್ ಆದಂತಿದೆ.

ಇತಿಹಾಸ ಕಂಡ ಅತ್ಯಂತ ಶ್ರೇಷ್ಠ ಟೆಸ್ಟ್ ಕ್ರಿಕೆಟ್ ಬೌಲರ್‌ಗಳ ಪೈಕಿ ಮುರಳಿ (ಬರ್ತ್‌ಡೇ: 17-4-1972) ಮುಂಚೂಣಿಯಲ್ಲಿದ್ದಾರೆ. ಅದು 800ಕ್ಕೂ ಹೆಚ್ಚು ವಿಕೆಟ್‌ಗಳ ಅಂಕಿ ಸಂಖ್ಯೆಗಳ ದಾಖಲೆ ಮಾತ್ರವಲ್ಲ, ಮುರಳಿಯ ಬೌಲಿಂಗ್‌ಅನ್ನು ಎದುರಿಸಿದ ವಿಶ್ವಖ್ಯಾತ ಬ್ಯಾಟ್ಸ್‌ಮನ್‌ಗಳ ಅನುಭವವೂ ಹೌದು. ‘ಇನ್ನೇನು ಎದುರಾಳಿ ತಂಡ ಪಂದ್ಯ ಗೆದ್ದೇಬಿಟ್ಟಿತು’ ಎನ್ನುವಾಗ ತನ್ನ ‘ದೂಸ್ರಾ’ ಸ್ಪಿನ್ ದಾಳಿಯಿಂದ ಇಡೀ ಪಂದ್ಯದ ಗತಿಯನ್ನೇ ಬದಲಾಯಿಸಿದ ಕೀರ್ತಿ ಮುರಳಿಯದ್ದು. ಟೆಸ್ಟ್ ಪಂದ್ಯಗಳಲ್ಲೂ, ಒಂದು ದಿನದ ಪಂದ್ಯಗಳಲ್ಲೂ ಅತ್ಯಧಿಕ ವಿಕೆಟ್ ಪಡೆದವರಲ್ಲಿ ಮುರಳಿಯದ್ದೇ ವಿಶ್ವದಾಖಲೆ. 2010ರಲ್ಲಿ ‘ಇದೇ ನನ್ನ ಕೊನೇ ಟೆಸ್ಟ್ ಪಂದ್ಯ’ ಎಂದು ಘೋಷಿಸಿ ಮೈದಾನಕ್ಕಿಳಿದ ಮುರಳಿ, ಆ ಪಂದ್ಯದಲ್ಲಿ ಕೊನೆಯ ಓವರ್‌ನ ಕೊನೇ ಬಾಲ್‌ನಲ್ಲಿ ವಿಕೆಟ್ ಕಬಳಿಸಿ, ಶೇನ್‌ವಾರ್ನ್ ಹೆಸರಿನಲ್ಲಿದ್ದ ವಿಶ್ವದಾಖಲೆಯನ್ನು (502 ವಿಕೆಟ್) ಅಳಿಸಿ ಹಾಕಿದವರು. ತಿರುಗಣೆ ಕೈಯಲ್ಲಿ ಚೆಂಡು ಹಿಡಿದು, ಕೆಂಡದುಂಡೆಗಳಂತಹ ಕಣ್ಣುಗಳನ್ನು ಅರಳಿಸಿ, ಬೆಳ್ಳಗೆ ನಗುವ ‘ಕಪ್ಪುಚಿನ್ನ’ ಮುರಳಿಯ ಆ ಇಮೇಜ್ ಲಕ್ಷಾಂತರ ಕ್ರಿಕೆಟಿಗರ ಮನಸ್ಸಿನಲ್ಲಿ ಎಂದಿಗೂ ಅಚ್ಚಳಿಯಂತಿದೆ. ಒಂದು ದಿನದ ಪಂದ್ಯದಲ್ಲೂ ಪಾಕಿಸ್ತಾನದ ವೇಗದ ಬೌಲರ್ ವಾಸಿಂ ಅಕ್ರಮ್ ಹೆಸರಲ್ಲಿದ್ದ ಅತ್ಯಧಿಕ ವಿಕೆಟ್ ದಾಖಲೆಯನ್ನು ಮುರಿದು ಅಗ್ರಸ್ಥಾನ ಪಡೆದಿರುವ ಮುರಳಿ ದೇಹಕ್ಕೆ ಸೂಕ್ತ ಎನ್ನಿಸುವ ಸಮಯದಲ್ಲೇ ಟೆಸ್ಟ್ ನಿವೃತ್ತಿ ಘೋಷಿಸಿದರು.

ಮುರಳಿಯ ಸ್ಪಿನ್ ಬೌಲಿಂಗ್ ಶೈಲಿಯ ಬಗ್ಗೆ ವಿದೇಶಿ ಆಟಗಾರರು ಪದೇ ಪದೇ ದೂರು ನೀಡಿದ್ದರು. 96ರಲ್ಲಿ ಮತ್ತು 99ರಲ್ಲಿ ಎರಡೆರಡು ಸಲ ಬೌಲಿಂಗ್ ಶೈಲಿಯ ವಿವಾದಕ್ಕೆ ಈಡಾದ ಅವರು, ಕೊನೆಗೂ ಐಸಿಸಿ ತನಿಖೆಯ ಬಳಿಕ ಕ್ಲೀನ್ ಚಿಟ್ ಪಡೆದರು. ಭಾರತದ ತಮಿಳು ಮೂಲದ ಈ ಸಿಂಹಳೀಯ ಕ್ರಿಕೆಟಿಗನ ಅಜ್ಜ ವಾಪಸ್ ಬಂದು ತಮಿಳುನಾಡಿನಲ್ಲೇ ನೆಲೆಸಿದ್ದು ಚೆನ್ನೈ ಜತೆಗೆ ಮುರಳಿಗೆ ಭಾವನಾತ್ಮಕ ಸಂಬಂಧವೂ ಇದೆ. ಹಾಗೆಂದೇ ಕಳೆದ ವರ್ಷದ ಐಪಿಎಲ್‌ನಲ್ಲಿ ಮುರಳಿ ಚೆನ್ನೈ ತಂಡದಲ್ಲಿದ್ದರು. ಇದೀಗ 2011ರ ಐಪಿಎಲ್‌ನಲ್ಲಿ ಹೊಸ ತಂಡವಾದ ಕೊಚ್ಚಿ ಅವರನ್ನು ಖರೀದಿಸಿದೆ. ವಿಶ್ವಕಪ್‌ನಲ್ಲೂ ಮುರಳಿ ಮಿಂಚಲಿದ್ದಾರೆ.




ಶೇನ್‌ವಾರ್ನ್ ಬಳಿಕ ಸುಮಾರು 10 ಮಂದಿ ಸ್ಪಿನ್ನರ್‌ಗಳನ್ನು ಆಸ್ಟ್ರೇಲಿಯಾ ಟ್ರೈ ಮಾಡಿದೆ. ಆದರೆ ಯಾರೂ ವಾರ್ನ್ ಮಟ್ಟಕ್ಕೆ ಬರಲಿಲ್ಲ. ಅದಕ್ಕೆಂದೇ ಆಸ್ಟ್ರೇಲಿಯಾ ಮುರಳಿಯನ್ನು ಕೋಚ್ ಆಗಿ ಕರೆದಿದ್ದು, ಜೂನ್‌ನಲ್ಲಿ ಬ್ರಿಸ್ಬೇನ್‌ಗೆ ತೆರಳಿದ್ದಾರೆ. 95ರಲ್ಲಿ ಬಾಕ್ಸಿಂಗ್‌ಡೇ ಟೆಸ್ಟ್‌ನಲ್ಲಿ ಮುರಳಿ ನೋಬಾಲ್ ಹಾಕಿದಾಗ ಆಸ್ಟ್ರೇಲಿಯಾದ ಪ್ರೇಕ್ಷಕರು ಮೈದಾನಕ್ಕೆ ಹಣ್ಣುಗಳನ್ನು ತೂರಿ, ನಕಲಿ ಮಾಡಿ ಅಣಕಿಸಿದ್ದರು. ಅದೇ ಪ್ರೇಕ್ಷಕರ ಮಕ್ಕಳೀಗ ಹೂಗಳನ್ನು ತೂರಿ, ಮುರಳಿಯನ್ನು ಬರಮಾಡಿಕೊಳ್ಳುತ್ತಿದ್ದಾರೆ! ಕ್ರಿಕೆಟ್ ಮಂತ್ರಸ್ಪರ್ಶ ಎಂದರೆ ಇದೇ ಇರಬೇಕು.

## ಜಾಫರ್ ಜಾದೂ



ಪ್ರತಿಷ್ಠಿತ ಬರ್ಲಿನ್ ಚಿತ್ರೋತ್ಸವ ಆರಂಭವಾಗಿದೆ. ಫೆ.19ರವರೆಗೆ ನಡೆಯಲಿದೆ. ಇರಾನಿನ ಪ್ರತಿಭಾವಂತ ಚಿತ್ರ ನಿರ್ದೇಶಕ, ನಿರ್ಮಾಪಕ ಜಾಫರ್ ಪನಾಹಿಯ ಐದು ಸಿನಿಮಾಗಳು ಚಿತ್ರೋತ್ಸವದಲ್ಲಿ ಪ್ರದರ್ಶನವಾಗಿವೆ. ಅದರಲ್ಲಿ ಸಾಕಷ್ಟು ಸುದ್ದಿ ಮಾಡಿದ ‘ಆಫ್‌ಸೈಡ್’ ಚಿತ್ರವೂ ಸೇರಿದೆ. ಆದರೆ ಈ ಚಿತ್ರಗಳನ್ನು ಬರ್ಲಿನ್‌ಗೆ ಬಂದು ನೋಡುವ ಭಾಗ್ಯ ಜಾಫರ್‌ನಿಗೆ ಸಿಕ್ಕಿಲ್ಲ. ಯಾಕೆಂದರೆ, ಇರಾನಿನ ಸರ್ಕಾರ ಅವರನ್ನು ಆರು ವರ್ಷಗಳ ಅವಧಿಗೆ ಜೈಲಿಗೆ ತಳ್ಳಿದೆ. ಆತ ಮಾಡಿರುವ ಅಪರಾಧ– ಸರಕಾರ ವಿರೋಧಿ ಸಿನಿಮಾ ಮಾಡಲು ಹೊರಟಿರುವುದು!

‘ಕಳೆದ ವರ್ಷ ಮಾರ್ಚಿನಲ್ಲಿ ಚುನಾವಣೆ ಬಳಿಕ ಇರಾನ್‌ನಲ್ಲಿ ನಡೆದ ರಾಜಕೀಯ ಬೆಳವಣಿಗೆಗಳ ಬಗ್ಗೆ ಜಾಫರ್ ಸಿನಿಮಾ ಮಾಡಲು ಹೊರಟಿದ್ದಾರೆ. ಅದಕ್ಕೆಂದೇ ಜೈಲಿಗೆ ಹಾಕಲಾಗಿದೆ’ ಎಂದು ಸರಕಾರ ಪ್ರಕಟಿಸಿದೆ. ಆದರೆ ಜಾಫರ್ ಪತ್ನಿಯ ಪ್ರಕಾರ, ಅಂತಹ ಯಾವ ಸಿನಿಮಾ ಮಾಡಲೂ ಜಾಫರ್ ಹೊರಟಿಲ್ಲ. ಸರಕಾರ ಈ ಮಾತನ್ನು ನಂಬುತ್ತಿಲ್ಲ. ‘6 ವರ್ಷ ಜೈಲು ಮಾತ್ರವಲ್ಲ; 20 ವರ್ಷಗಳ ಕಾಲ ಜಾಫರ್ ಸಿನಿಮಾ ಮಾಡುವಂತಿಲ್ಲ; ಚಿತ್ರಕಥೆ ಬರೆಯುವಂತಿಲ್ಲ; ಸಂದರ್ಶನವನ್ನೂ ನೀಡುವಂತಿಲ್ಲ’ ಎಂದೂ ಅಲ್ಲಿನ ಸರಕಾರ ನಿಷೇಧ ಹೇರಿದೆ! ಇರಾನಿನ ಹೊಸ ಅಲೆಯ ಚಿತ್ರಗಳ ವಕ್ತಾರರಂತಿರುವ ಜಾಫರ್, 10ನೇ ವಯಸ್ಸಿಗೇ ಮೊದಲ ಪುಸ್ತಕ ಹೊರತಂದ ಪ್ರತಿಭಾವಂತ. ಎಳವೆಯಲ್ಲೇ 8 ಎಂ.ಎಂ ಸಿನಿಮಾದಲ್ಲಿ ನಟಿಸಿದ್ದು, ಶೂಟಿಂಗ್ ಸಹಾಯಕನಾಗಿದ್ದವ. ಬಳಿಕ ಛಾಯಾಗ್ರಹಣ ಕಲಿತ. ಮಿಲಿಟರಿಗೆ ಸೇರಿ ಇರಾಕ್ ಯುದ್ಧದಲ್ಲಿ ಭಾಗವಹಿಸಿದ. ಆ ಯುದ್ಧದ ಬಗ್ಗೆ ಸಿನಿಮಾ ಒಂದನ್ನೂ ತೆಗೆದ. ಟೆಹರಾನಿನ ಸಿನಿಮಾ ಮತ್ತು ಟಿ.ವಿ ಕಾಲೇಜಿನಲ್ಲಿ ನಿರ್ದೇಶನ ಕಲಿತ ಜಾಫರ್ ಬಿಡುಗಡೆಗೆ ಜಗತ್ತಿನ ಎಲ್ಲೆಡೆಯಿಂದ ಒತ್ತಡ ನಡೆದಿದೆ.

ಬರ್ಲಿನ್ ಚಿತ್ರೋತ್ಸವದ ಏಳು ಜನ ಜ್ಯೂರಿಗಳಲ್ಲಿ ಜಾಫರ್ ಕೂಡಾ ಒಬ್ಬರು. ಮೊದಲ ದಿನ ಜ್ಯೂರಿಗಳು ಪತ್ರಿಕಾಗೋಷ್ಠಿ ಮಾಡಿದಾಗ, ಮಧ್ಯದಲ್ಲಿ ಒಂದು ಕುರ್ಚಿಯನ್ನು ಖಾಲಿ ಬಿಟ್ಟು ಜಾಫರ್ ಮೇಲಿನ ಪ್ರೀತಿಯನ್ನು ತೋರಿದ್ದಾರೆ. ವೆನಿಸ್ ಚಿತ್ರೋತ್ಸವದಲ್ಲಿ ಗೋಲ್ಡನ್ ಲಯನ್, ಬರ್ಲಿನ್ ಚಿತ್ರೋತ್ಸವದಲ್ಲಿ ಸಿಲ್ವರ್ ಬೀರ್ ಪ್ರಶಸ್ತಿ ಗೆದ್ದಿರುವ ಜಾಫರ್, ಜೈಲಿನಿಂದ ಬೇಗ ಹೊರಬರಲಿ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65